ಆ) ರೂ. 13.51 ಲಕ್ಷಗಳು

ಇ) ರೂ. 133.08 ಲಕ್ಷಗಳು

ಈ) ರಾಜ್ಯದ ಒಟ್ಟು 176 ಸಂಘಗಳ ಪೈಕಿ

ಚಾಲ್ತಿಯಲ್ಲಿರುವ ಸಹಕಾರ ಸಂಘಗಳು	80
ಸ್ಥಗಿತಗೊಂಡಿರುವ ಸಹಕಾರ ಸಂಘಗಳು	66
ಸಮಾಪನೆಗೊಂಡ ಸಹಕಾರ ಸಂಘಗಳು	30
ಒಟ್ಟು	**176**

641(1263) ಶ್ರೀ ಉದಾಸಿ ಸಿ.ಎಂ. (ಹಾನಗಲ್) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಾವೇರಿ ಜಿಲ್ಲೆಯಲ್ಲಿ ಕಡು ಬಡವರ ಹಳದಿ ಪಡಿತರ ಚೀಟಿಗಳನ್ನು ರದ್ದುಪಡಿಸಿದ್ದು ಸರಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ, ಈ ರದ್ದತಿಯನ್ನು ತೆಗೆಯಲು ಕ್ರಮ ಕೈಗೊಳ್ಳಲಾಗಿದೆಯೇ;

ಇ) ತಾಲ್ಲೂಕುವಾರು ಹಳದಿ ಪಡಿತರ ಚೀಟಿಗಳ ವಿವರ ನೀಡುವುದು;

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).

ಅ) ಹಾವೇರಿ ಜಿಲ್ಲೆಯಲ್ಲಿ ಅನರ್ಹ ಕುಟುಂಬಗಳು ಹೊಂದಿರುವ ಬಿ.ಪಿ.ಎಲ್. ಪಡಿತರ ಚೀಟಿಗಳನ್ನು ಮಾತ್ರ ರದ್ದುಪಡಿಸಲಾಗಿರುತ್ತದೆ. ಅರ್ಹ ಕುಟುಂಬಗಳು ಬಿ.ಪಿ.ಎಲ್. ಪಟ್ಟಿಯಲ್ಲಿ ಕೈಬಿಟ್ಟಿವೆ. ಅನರ್ಹರು ಪಟ್ಟಿಯಲ್ಲಿ ಸೇರಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಸರ್ಕಾರದ ಗಮನಕ್ಕೆ ಬಂದಿದ್ದರ ಆಧಾರ ಮನೆ ಮನೆ ಪುನರ್ ಸಮೀಕ್ಷೆ ಕಾರ್ಯ ಮಾಡಲು ಸರ್ಕಾರ ಆದೇಶ ಸಂಖ್ಯೆ: ಅನಾಸ 114 ಡಿಆರ್ಎ 2004 ದಿನಾಂಕ 10-1-2005ರಲ್ಲಿ ಆದೇಶ ಹೊರಡಿಸಿದ್ದು, ಆದೇಶಾನುಸಾರ ಪುನರ್ ಸಮೀಕ್ಷೆ ಈಗಾಗಲೇ ಪ್ರಾರಂಭಗೊಂಡಿದ್ದು, ಏಪ್ರಿಲ್ 2005ರಲ್ಲಿ ಮುಕ್ತಾಯಗೊಳಿಸಿ, ಸಮೀಕ್ಷಾ ವರದಿಯನ್ನು ಗ್ರಾಮಸಭೆ / ವಾರ್ಡ್ ಸಭೆಗಳಲ್ಲಿಟ್ಟು ಅನುಮೋದನೆ ಪಡೆದು ಅರ್ಹರಿಗೆ ಹಳದಿ ಪಡಿತರ ಚೀಟಿಗಳನ್ನು ಕೊಡಲಾಗುವುದು. (ಸಮೀಕ್ಷಾ ತಂಡ ಬರುವಾಗ ಎಲ್ಲಾ ಕುಟುಂಬಸ್ಥರು ಮಾಹಿತಿ ಕೊಡುವುದು).

ಇ) ತಾಲ್ಲೂಕುವಾರು ಹಳದಿ ಪಡಿತರ ಚೀಟಿಗಳ ವಿವರ ಈ ಕೆಳಕಂಡಂತಿರುತ್ತದೆ:

ಕ್ರ. ಸಂ.	ತಾಲ್ಲೂಕಿನ ಹೆಸರು	ಹಳದಿ ಪಡಿತರ ಚೀಟಿ ಹೊಂದಿದ ಸಂಖ್ಯೆ	ರದ್ದುಪಡಿಸಿದ ಅನರ್ಹ ಪಡಿತರ ಚೀಟಿಗಳ ಸಂಖ್ಯೆ
1.	ಹಾವೇರಿ	38079	4096
2.	ರಾಣೆಬೆನ್ನೂರ	49722	8391
3.	ಹಾನಗಲ್	43893	4894
4.	ಸವಣೂರ	17635	2191
5.	ಬ್ಯಾಡಗಿ	1 346	1974
6.	ಹಿರೇಕೆರೂರ	4 340	6761
7.	ಶಿಗ್ಗಾಂವ	21001	1209
	ಒಟ್ಟು	228016	29516

642(1264) ಶ್ರೀ ಉದಾಸಿ ಸಿ.ಎಂ. (ಹಾನಗಲ್) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2002–03ನೇ ಸಾಲಿನಲ್ಲಿ ಹಾನಗಲ್ಲ ತಾಲ್ಲೂಕು ಅಕ್ಕಿ ಆಲೂರು ಮತ್ತು ಹಾನಗಲ್ಲ ಹೋಬಳಿಯ ರೈತರಿಗೆ ತಡೆಹಿಡಿದಿರುವ ವಿಮೆ ಪರಿಹಾರವನ್ನು ಮಂಜೂರು ಮಾಡಲಾಗುತ್ತದೆಯೇ;

ಆ) ಹಾಗಿದ್ದಲ್ಲಿ, ಮಂಜೂರು ಮಾಡಿ ಎಂದಿನಿಂದ ಬಿಡುಗಡೆ ಮಾಡಲಾಗುವುದು;

ಇ) ಹಾವೇರಿ ಜಿಲ್ಲೆಯ ರೈತರು ಬೆಳೆ ವಿಮೆಯಿಲ್ಲ ವಂಚಿತರಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಈ) 2004–05ನೇ ಸಾಲಿನಲ್ಲಿ ಹಾನಗಲ್ಲ ಮತ್ತು ಅಕ್ಕಿಆಲೂರು ಹೋಬಳಿಯನ್ನು ಭೀಕರ ಬರಗಾಲ ಪ್ರದೇಶ ಎಂದು ಘೋಷಣೆ ಮಾಡಿದ್ದರೂ ನೀರಾವರಿ ಭತ್ತಕ್ಕೆ ಬೆಳೆ ವಿಮೆ ಪರಿಹಾರ ನೀಡದೆ ಇರುವುದಕ್ಕೆ ಸರ್ಕಾರವು ಕೈಗೊಂಡಿರುವ ಕ್ರಮವೇನು?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) 2002–03ನೇ ಸಾಲಿನಲ್ಲಿ ಹಾನಗಲ್ಲ ತಾಲ್ಲೂಕು ಅಕ್ಕಿ ಆಲೂರು ಮತ್ತು ಹಾನಗಲ್ಲ ಹೋಬಳಿಯ ರೈತರಿಗೆ ಬೆಳೆ ವಿಮಾ ನಷ್ಟ ಪರಿಹಾರ ವಿತರಿಸುವಲ್ಲಿ ಯಾವುದೇ ಬಾಕಿ ಇಲ್ಲವೆಂದು ಭಾರತೀಯ ಕೃಷಿ ವಿಮಾ ಕಂಪನಿ ನಿಯಮಿತ ಸಂಸ್ಥೆಯು ತಿಳಿಸಿರುತ್ತದೆ.

ಆ) ಉದ್ಭವಿಸುವುದಿಲ್ಲ.

ಇ) ಇಲ್ಲ.

ಈ) 2004–05ನೇ ಸಾಲಿನಲ್ಲಿ ಮುಂಗಾರು, ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ವಿವಿಧ ಬೆಳೆಗಳನ್ನು ಅಧಿಸೂಚಿಸಿದ್ದು, ಬೆಳೆ ಕಟಾವು ಪ್ರಯೋಗಗಳ